ತೊಂದರೆಯನ್ನು ನಿವಾರಿಸಲು ಮೊಕದ್ದಮೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬಾಕಿ ಇರುವ ಸ್ಥಳಗಳಲ್ಲಿ ಹೊಸ: ಅಧಿಕ ನ್ಯಾಯಾಲಯಗಳನ್ನು ಸ್ಥಾಪಿಸುವುದು, ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು, ನ್ಯಾಯಾಧೀಶರಿಗೆ ಮೊಕದ್ದಮೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಅವಶ್ಯವಿರುವ ಸವಲತ್ತುಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ದಿಕ್ಕಿನಲ್ಲಿ, ಬಿಜಾಪುರ ಜಿಲ್ಲೆಯಲ್ಲಿ ಪೈಲೆಟ್ ಪ್ರಾಜೆಕ್ಟ ಯೋಜನೆಯಡಿಯಲ್ಲಿ ಆರು ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

ಇ) ಪ್ರಕರಣಗಳನ್ನು ಇಂತಿಷ್ಟೆ ಕಾಲದಲ್ಲಿ ತೀರ್ಮಾನಿಸಲು ಯಾವುದೇ ಕಾಲಮಿತಿ ಹಾಕಿಕೊಂಡಿಲ್ಲ. ಈ ದಿಕ್ಕಿನಲ್ಲಿ ನಿಯಮಾವಳಿಯನ್ನು ರೂಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಜಾಪುರ - ಗುಲ್ಬರ್ಗಾ ರಸ್ತೆ ಕುರಿತು

2134 - ಶ್ರೀ ಬಸವನಗೌಡ ಪಾಟೀಲ್ (ವಿಜಾಪರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಗುಲ್ಬರ್ಗಾ ರಸ್ತೆ ತೀವ್ರ ಹದೆಗಟ್ಟಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹುಬ್ಬಳ್ಳಿಯಿಂದ ಅಂಕೋಲಾ ರಸ್ತೆಯ ಮಾದರಿಯಂತೆ ಬೆಳಗಾಂವ ವಿಜಾಪುರ ಹೈದ್ರಾಬಾದ್ ರಸ್ತೆಯನ್ನು ವಿಶೇಷ ಯೋಜನೆಯಲ್ಲಿ ತೆಗೆದುಕೊಂಡು ಈ ರಸ್ತೆಯನ್ನು ನಿರ್ಮಿಸಲು ಸರಕಾರ ಕ್ರಮ ಕೈಗೊಳ್ಳುವುದೇ,

ಇ) ಈ ನಿಟ್ಟಿನಲ್ಲಿ ಸರಕಾರದ ಉದ್ದೇಶವೇನು?

ಶ್ರೀ ಶಿವನಾಂದ ಹೆಚ್.ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಿಜಾಪುರ-ಗುಲ್ಬರ್ಗಾ ರಸ್ತೆಯ ಕೆಲವು ಭಾಗಗಳು ಕೆಟ್ಟಿದ್ದು ಸುಗಮ ವಾಹನ ಸಂಚಾರಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇಂತಹ ಪ್ರಸ್ತಾಪ ಇರುವುದಿಲ್ಲ.

ಇ) ಸದರಿ ರಸ್ತೆಯನ್ನು ಲಭ್ಯ ಮಾಡಿರುವ ಅನುದಾನದಲ್ಲಿ ಸೂಕ್ತವಾಗಿ ನಿರ್ವಹಣೆಮಾಡಬೇಕೆಂದು ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ರಾಷ್ಟ್ರೀಯ ನೀರು ಪೂರೈಕೆ ಯೋಜನೆ ಕುರಿತು.

2135 - ಶ್ರೀ ಯು.ಬಿ. ಬಣಕಾರ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?